ಕನ್ನಡ ರಾಜ್ಯೋತ್ಸವದ ಶುಭಾಶಯಗಳು

ಸಿರಿಗನ್ನಡಂ ಗೆಲ್ಗೆ, ಸಿರಿಗನ್ನಡಂ ಬಾಳ್ಗೆ

ಅನಿಕೇತನ ANIKETANA

ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯ

ಆಗು ನೀ ಅನಿಕೇತನ BE BOUNDLESS

Dr. Manmohan Singh Bengaluru City University

ಸಂಪುಟ 02 | ಸಂಚಿಕೆ 01 | ಬೆಂಗಳೂರು | November 2026 | ಪುಟ 01

ಜಾತಿ–ಧರ್ಮ ವೈಷಮ್ಯ ನಿವಾರಣೆಗೆ ಗಾಂಧಿ ಮಾರ್ಗ ಪ್ರಸ್ತುತ – ಬರಗೂರು ರಾಮಚಂದ್ರಪ್ಪ



ಗಾಂಧಿ ಜಯಂತಿ ಸಮಾರಂಭದಲ್ಲಿ ಬರಗೂರು ರಾಮಚಂದ್ರಪ್ಪನವರೊಂದಿಗೆ ವಿ.ವಿ. ಆಡಳಿತ ಮಂಡಳಿ ಸದಸ್ಯರು ಮತ್ತು ಹಿರಿಯ ಪ್ರಾಧ್ಯಾಪಕರು

ಜಾತಿಯ ಜೈಲುಗಳು ಮತ್ತು ಧರ್ಮ ದ್ವೇಷದ ದ್ವೀಪಗಳಲ್ಲಿ ಬಂಧಿಗಳಾಗಿರುವ ದೇಶವಾಸಿಗಳನ್ನು ಬಿಡುಗಡೆಗೊಳಿಸಿ ಬಹುತ್ವ ಭಾರತದ ನೆಲೆಯನ್ನು ಸದೃಢಗೊಳಿಸಲು ಗಾಂಧೀ–ಜಿಯವರ ತತ್ವ ಚಿಂತನೆ ಇಂದು ಅತ್ಯಂತ ಪ್ರಸ್ತುತವಾಗಿದೆ ಎಂದು ಪ್ರಗತಿಪರ ಚಿಂತಕರಾದ ನಾಡೋಜ ಬರಗೂರು ರಾಮಚಂದ್ರಪ್ಪ ಅಭಿಪ್ರಾಯಪಟ್ಟಿದ್ದಾರೆ.

ಡಾ. ಎಂಎಸ್‌ಬಿಸಿಯು ಮಹಾತ್ಮ ಗಾಂಧಿ ಅಧ್ಯಯನ ಕೇಂದ್ರದ ವತಿಯಿಂದ ಏರ್ಪಡಿಸಲಾಗಿದ್ದ 157ನೇ ಗಾಂಧಿ ಜಯಂತಿ ಸಮಾರಂಭದ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಅವರು ಪ್ರಚಲಿತ ವಿದ್ಯಮಾನಗಳ ಬಗ್ಗೆ ವಿಶ್ಲೇಷಿಸಿದರು.

ದೇಶದಲ್ಲೀಗ ವ್ಯಕ್ತಿತ್ವ ಭಂಜನೆಯ ಹುನ್ನಾರ ಮುನ್ನಲೆಗೆ ಬಂದಿದ್ದು ಮಹಾತ್ಮ ಗಾಂಧಿಯವರೂ ಅಂತಹ ನಕಾರಾತ್ಮಕ ಕೃತ್ರಿಮ ದಾಳಿಗೆ ಒಳಗಾಗುತ್ತಿರುವುದು ಅಪಾರ ವಿಷಾದದ ಸಂಗತಿಯಾಗಿದೆ ಎಂದು ಅವರು ವಿಮರ್ಶಿಸಿದರು.

ನುಡಿ ನೈತಿಕತೆ ಹಾಗೂ ರಾಜ–ಕೀಯ ಮತ್ತು ಸಾಮಾಜಿಕ ನೈತಿಕತೆ ನಶಿಸುತ್ತಿರುವ ಇಂದಿನ ಸಂಕೀರ್ಣ ಸನ್ನಿವೇಶದಲ್ಲಿ ಸ್ವಾತಂತ್ರ್ಯ ಮತ್ತು ಸಂವಿಧಾನ ಮೌಲ್ಯಗಳನ್ನು ಸಂರಕ್ಷಿಸುವ ಹೊಣೆ ಎಲ್ಲರ ಮೇಲಿದೆ ಎಂದು ಅವರು ತಿಳಿಸಿದರು.

ಪ್ರಜಾಪ್ರಭುತ್ವದಲ್ಲಿ ಭಿನ್ನಾಭಿಪ್ರಾಯ ಸಹಜವೆಂದ ಅವರು ಸರ್ಕಾರವನ್ನು ಟೀಕಿಸುವವರಿಗೆ ದೇಶ ದ್ರೋಹಿಗಳ ಹಣೆಪಟ್ಟಿ ಹಚ್ಚುವ ಪ್ರವೃತ್ತಿಯನ್ನು ಬಲವಾಗಿ ಖಂಡಿಸಿದರು. ಸಂವಾದದ ಮುಕ್ತ ವಾತಾವರಣ ಮಾಯವಾಗಿದೆ ಎಂದು ಅವರು ವಿಷಾದಿಸಿದರು.

ಗಾಂಧೀಜಿಯವರ ಉಪ್ಪಿನ ಸತ್ಯಾಗ್ರಹ ಮತ್ತು ಅಂಬೇಡ್ಕರ್ ಅವರ ಮಹಾಡ್ ಸತ್ಯಾಗ್ರಹ ವಸಾಹತುಶಾಹಿ ಹಾಗೂ ವರ್ಣಾಹತುಶಾಹಿಯ ವಿರುದ್ಧದ ಮಾರ್ಮಿಕ ಸಂಕೇತಗಳೆಂದು ಪ್ರೊ. ಬರಗೂರು ರಾಮಚಂದ್ರಪ್ಪ ಬಣ್ಣಿಸಿದರು.


ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕುಲಪತಿಗಳಾದ ಪ್ರೊ.ರಮೇಶ್.ಬಿ. ರವರು ಗಾಂಧೀಜಿಯವರ ತತ್ವ ಮತ್ತು ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ ಪ್ರಬುದ್ಧ ಭಾರತ ನಿರ್ಮಾಣ–ಕ್ಕೆ ಮುಂದಾಗುವಂತೆ ವಿದ್ಯಾರ್ಥಿಗಳನ್ನು ಉತ್ತೇಜಿಸಿದರು.

ವಿಶ್ವವಿದ್ಯಾನಿಲಯದ ಮಹಾತ್ಮ ಗಾಂಧಿ ಅಧ್ಯಯನ ಕೇಂದ್ರದ ವತಿಯಿಂದ ಶೀಘ್ರದಲ್ಲೇ ಗಾಂಧೀಜಿಯವರ ತತ್ವಗಳ ಅಧ್ಯಯನದ ಡಿಪ್ಲೊಮೊ ಕೋರ್ಸ್ ಆರಂಭಿಸುವ ಇಂಗಿ–ತವನ್ನು ಅವರು ವ್ಯಕ್ತಪಡಿಸಿದರು.

ದಿವಂಗತ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿಯವರ ಅಮೂಲ್ಯ ಕೊಡುಗೆಯನ್ನು ಇದೇ ವೇಳೆ ಸ್ಮರಿಸಲಾಯಿತು. ಮಹಾತ್ಮ ಗಾಂಧಿ ಅಧ್ಯಯನ ಕೇಂದ್ರದ ನಿರ್ದೇಶಕರಾದ ಪ್ರೊ. ಜ್ಯೋತಿ ವೆಂಕಟೇಶ್ ಪ್ರಾಸ್ತಾವಿಕ ಭಾಷಣ ಮಾಡಿದರು. ಕುಲಸಚಿವರಾದ (ಮೌಲ್ಯಮಾಪನ) ಪ್ರೊ.ರಮೇಶ. ಬಿ.ಕುಡೇನಟ್ಟಿ, ವಿತ್ತಾಧಿಕಾ–ರಿಗಳಾದ ಎಂ.ವಿ.ವಿಜಯಲಕ್ಷ್ಮಿ ಹಾಗೂ ಸಿಂಡಿಕೇಟ್ ಸದಸ್ಯರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಗಾಂಧಿ ಜಯಂತಿ ಅಂಗವಾಗಿ ಆಯೋಜಿಸಸಲಾಗಿದ್ದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ಮಹಾತ್ಮ ಗಾಂಧಿ ಅಧ್ಯಯನ ಕೇಂದ್ರದ ಸದಸ್ಯರಾದ ಡಾ. ಮಾಲಿನಿ, ಡಾ. ಪ್ರಿಯಾಂಕಾ, ಡಾ. ಅಮರ್, ಡಾ. ನಾಗರಾಜ್ ಮತ್ತು ಡಾ. ಗಂಗಪ್ಪ ಕಾರ್ಯಕ್ರಮ ನಿರ್ವಹಿಸಿದರು.



ಮೈಸೂರು ಬ್ಯಾಂಕ್ ವೃತ್ತದಲ್ಲಿರುವ ಸ್ವಾತಂತ್ರ್ಯ ಸಂಗ್ರಾಮದ ಹುತಾತ್ಮ ವಿದ್ಯಾರ್ಥಿಗಳ ಸ್ಮಾರಕಕ್ಕೆ ಗಣ್ಯರು ಪುಷ್ಪನಮನದ ಮೂಲಕ ಗೌರವ ಸಮರ್ಪಿಸಿದರು.

ಪ್ರತಿಭಾ ಸ್ಪರ್ಧೆಗಳ ವಿಜೇತರು

"ವಿದ್ಯಾರ್ಥಿ ಜೀವನದಲ್ಲಿ ಗಾಂಧೀಜಿಯವರ ತತ್ವಗಳು ಮತ್ತು ಅವುಗಳ ಪ್ರಸ್ತುತತೆ" ಎಂಬ ವಿಷಯದ ಭಾಷಣ ಸ್ಪರ್ಧೆಯ ಸ್ನಾತಕೋತ್ತರ ವಿಭಾಗದಲ್ಲಿ ಸಮಾಜಶಾಸ್ತ್ರ ವಿಭಾಗದ ಅಫೀಫಾ ಪ್ರಥಮ ಬಹುಮಾನ, ಕನ್ನಡ ವಿಭಾಗದ ರಂಗಸ್ವಾಮಿ ದ್ವಿತೀಯ ಬಹುಮಾನ ಗಳಿಸಿದರು. ಪದವಿ ವಿಭಾಗದಲ್ಲಿ ಬಿಸಿಎ ವಿದ್ಯಾರ್ಥಿನಿ ಪಿ. ಶ್ರಾವ್ಯ ಪ್ರಥಮ ಬಹುಮಾನ ಹಾಗೂ ಬಿ.ಎ. ವಿದ್ಯಾರ್ಥಿ ಪ್ರಫುಲ್ ದ್ವಿತೀಯ ಬಹುಮಾನ ಪಡೆದರು. "ಜವಾಬ್ದಾರಿಯುತ ನಾಯಕತ್ವಕ್ಕೆ ಅಡಿಪಾಯವಾಗಿ ಗಾಂಧೀ–ಜಿಯವರ ಮೌಲ್ಯಗಳು" ಎಂಬ ವಿಷಯದ ಪ್ರಬಂಧ ಸ್ಪರ್ಧೆಯ ಸ್ನಾತಕೋತ್ತರ ವಿಭಾಗದಲ್ಲಿ ಭೌತಶಾಸ್ತ್ರ ವಿಭಾಗದ ಮಾನಸ ಎಲ್. ಪ್ರಥಮ ಬಹುಮಾನ ಪಡೆದರು. ಇತಿಹಾಸ ವಿಭಾಗದ ದಿವ್ಯದರ್ಶಿನಿ ಮತ್ತು ಎಂ.ಕಾಂ. ವಿದ್ಯಾರ್ಥಿ ಅಭಿಷೇಕ್ ವಿ. ಜಂ–ಟಿಯಾಗಿ ದ್ವಿತೀಯ ಬಹುಮಾನ ಗಳಿಸಿದರು. ಪದವಿ ವಿಭಾಗದಲ್ಲಿ ಬಿಸಿಎ ವಿದ್ಯಾರ್ಥಿನಿ ಪಿ. ಶ್ರಾವ್ಯ ಪ್ರಥಮ ಬಹುಮಾನ ಪಡೆದರು.

ಸಾಮಾಜಿಕ ಹೊಣೆಗಾರಿಕೆಯಿಂದ ಮಾಧ್ಯಮ ವಿಮುಖವಾಗಬಾರದು–ಪ್ರೊ. ಬಿ.ಕೆ. ರವಿ

ವಾಣಿಜ್ಯೀಕರಣದ ಭರಾಟೆಯ ನಡುವೆಯೂ ಮಾಧ್ಯಮ ಸಾಮಾಜಿಕ ಹೊಣೆಗಾರಿಕೆಯಿಂದ ವಿಮುಖವಾಗಬಾರದೆಂದು ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಬಿ.ಕೆ. ರವಿ ಅಭಿಪ್ರಾಯಪಟ್ಟಿದ್ದಾರೆ.

ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗವು ಕರ್ನಾಟಕ ಪತ್ರಕರ್ತೆಯರ ಸಂಘ ಹಾಗೂ ಕರ್ನಾಟಕ ಡಿಜಿಟಲ್ ನ್ಯೂಸ್ ಮೀಡಿಯಾ ಅಸೋಸಿಯೇಷನ್ ಸಹಯೋಗದಲ್ಲಿ ಸೆಂಟ್ರಲ್ ಕಾಲೇಜ್ ಕ್ಯಾಂಪಸ್‌ನಲ್ಲಿ ಏರ್ಪಡಿಸಲಾಗಿದ್ದ 'ಮಾಧ್ಯಮ ಮಂಥನ' ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಾಧ್ಯಮ ರಂಗದಲ್ಲಿ ಭಾಷಾ ಪ್ರೌಢಿಮೆ ಮತ್ತು ಭಾಷಾಂತರ ಗುಣಮಟ್ಟ ಉತ್ತಮಪಡಿಸಬೇಕಾದ ಅಗತ್ಯವನ್ನು ಒತ್ತಿ ಹೇಳಿದ ಅವರು ಸಾಹಿತ್ಯದ ಬೆಳವಣಿಗೆಗೂ ಪತ್ರಿಕೋದ್ಯಮ ಅಪಾರ ಒತ್ತಾಸೆ ನೀಡಿದೆ ಎಂದು ವಿವರಿಸಿದರು.

ಮೌಲ್ಯಾಧಾರಿತ ಪತ್ರಿಕೋದ್ಯಮ

ಸ'ವ'ಾರ'ಂಭ'ದ' ಅಧ್ಯಕ್ಷತೆ ವಹಿಸಿದ್ದ ಡಾ.ಎಂ–ಎಸ್‌ಬಿಸಿಯು ಕುಲಪತಿಗಳಾದ ಪ್ರೊ.ರ'ಮೇ'ಶ್.ಬಿ.ರ'ವ'ರು ಮಾತನಾಡಿ ಸಾಮಾಜಿಕ ಬದ್ಧತೆ ಮತ್ತು ನೈತಿಕ ಮೌಲ್ಯಗಳನ್ನು ರೂಢಿಸಿಕೊಳ್ಳುವಂತೆ ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ ಸಲಹೆಯಿತ್ತರು.

ಪ್ರಸ್ತುತ ಕಾಲಘಟ್ಟದ ಅಗತ್ಯಗಳಿಗೆ ಅನುಗುಣವಾಗಿ ಪಠ್ಯಕ್ರಮ ಪರಿಷ್ಕರಣೆ ಜೊತೆಗೆ ಅನುಭವಿ ಪತ್ರಕರ್ತರೊಂದಿಗೆ ಮಾಸಿಕ ಸಂವಾದ ಹಾಗೂ ತಾಂತ್ರಿಕ ತರಬೇತಿ ಒದಗಿಸುವುದಾಗಿ ಸಮೂಹ ಸಂವಹನ ವಿದ್ಯಾರ್ಥಿಗಳಿಗೆ ಅವರು ಭರವಸೆಯಿತ್ತರು.

ಕೃತಕ ಬುದ್ಧಿಮತ್ತೆಯ ಸವಾಲು

ಮೊದಲ ಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಹಿರಿಯ ಪತ್ರಕರ್ತರಾದ ಪ್ರಜಾವಾಣಿ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರಭಟ್ಟರು ವಿದ್ಯುನ್ಮಾನ ಮತ್ತು ಡಿಜಿಟಲ್ ತಂತ್ರಜ್ಞಾನದ ಜೊತೆಗೆ ಮುದ್ರಣ ಮಾಧ್ಯಮ ಇದೀಗ ಕೃತಕ ಬುದ್ಧಿಮತ್ತೆಯ ಬಳಕೆಯಿಂದಲೂ ಗಂಭೀರ ಸವಾಲು ಎದು–ರಿಸುತ್ತಿದೆ ಎಂದು ಎಚ್ಚರಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾದ ಶಿವಾನಂದ ತಗಡೂರು ಮಾತನಾಡಿ ಸುದ್ದಿಗಳ ರಾಶಿಯ ನಡುವೆ ನಿಜವಾದ ಸುದ್ದಿಯನ್ನು ಹುಡುಕುವುದು ಹಾಗೂ ಮಾಹಿತಿಯ ನಿಖರತೆಯನ್ನು ಖಾತರಿಪಡಿಸಿಕೊಳ್ಳುವುದು ಅತಿದೊಡ್ಡ ಸವಾಲಾಗಿದೆ ಎಂದು ಬಣ್ಣಿಸಿದರು.

ಸಮಕಾಲೀನ ಸವಾಲು–ಸಾಧ್ಯತೆಗಳು

ಡಿಜಿಟಲ್ ಮಾಧ್ಯಮ ಇಂದು ಎದುರಿಸುತ್ತಿರುವ ಸವಾಲುಗಳು ಮತ್ತು ಸಾಧ್ಯತೆಗಳು ಕು–ರಿತು ಮಾತನಾಡಿದ ಟಿವಿ–9 ಕನ್ನಡದ ಡಿಜಿಟಲ್ ವಿಭಾಗದ ಮುಖ್ಯಸ್ಥ ಭಾಸ್ಕರ ಹೆಗಡೆ ಅವರು, ಗೂಗಲ್, ಮೆಟಾ ಅಥವಾ ಎಕ್ಸ್ ಕಂಪನಿಗಳ ತಂತ್ರಜ್ಞಾನವು ನಮ್ಮ ಡಿಜಿಟಲ್ ವೇದಿಕೆಗಳ ಯಶಸ್ಸನ್ನು ಹೇಗೆ ನಿರ್ಧರಿಸುತ್ತದೆ ಎಂಬುದನ್ನು ಎಳೆಎಳೆಯಾಗಿ ಬಿಡಿಸಿಟ್ಟರು.

ಕೃತಕ ಬುದ್ಧಿಮತ್ತೆ (ಎಐ) ಪತ್ರಿಕೋದ್ಯಮಕ್ಕೆ ಮಾರಕ ಎಂದು ಮೇಲ್ನೋಟಕ್ಕೆ ಅನ್ನಿಸಬಹುದು. ಆದರೆ, 'ಎಐ' ಗೆ ಯಾವ ಕಾರಣಕ್ಕೂ ಸುದ್ದಿಯ ಹಿಂದಿನ ಕಾರಣಗಳನ್ನು ಹುಡುಕಲು ಸಾಧ್ಯವಿಲ್ಲ. ಸನ್ನಿವೇಶಕ್ಕೆ ತಕ್ಕಂತೆ ವಿಶ್ಲೇಷಣೆ ಮಾಡಲು ಸಾಧ್ಯವಿಲ್ಲ. ಆ ಕೆಲಸವನ್ನು ಪತ್ರಕರ್ತರೇ ಮಾಡಬೇಕಾಗುತ್ತದೆ ಎಂದು ಅವರು ಪ್ರತಿಪಾದಿಸಿದರು.

ಎಲೆಕ್ಟ್ರಾನಿಕ್ ಮಾಧ್ಯಮದ ಕುರಿತು ಮಾತನಾಡಿದ 'ಟಿವಿ ೫ ಕನ್ನಡ' ವಾಹಿನಿಯ ಸಂಪಾದಕರಾದ ಎ.ಎಸ್. ರಮಾಕಾಂತ್‌ರವರು ಜನಪ್ರಿಯತೆ ಹಾಗೂ ಟಿಆರ್‌ಪಿ ಗಳಿಕೆಗಾಗಿ ವಿಶ್ವಾಸಾರ್ಹತೆಯನ್ನು ಬಲಿ ಕೊಡಬಾರದು ಎಂದು ಎಚ್ಚರಿಸಿದರು. 'ಇದು ನಮ್ಮಲ್ಲೇ ಮೊದಲು' ಎಂಬ ಗೀಳಿಗೆ ಬಿದ್ದು, ಅವಸರದಲ್ಲಿ ಸುಳ್ಳು ಸುದ್ದಿ ಬಿತ್ತರಿಸಬಾರದು ಎಂದು ಅವರು ಸೂಚಿಸಿದರು.

ಸಂವಹನ ವಿಭಾಗದ ಮುಖ್ಯಸ್ಥರಾದ ಡಾ.ಟಿ. ಎನ್.ತಾಂಡವಗೌಡ, ಕರ್ನಾಟಕ ಪತ್ರಕರ್ತೆಯರ ಸಂಘದ ಅಧ್ಯಕ್ಷರಾದ ಡಾ.ಆರ್. ಪೂರ್ಣಿಮಾ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕರ್ನಾಟಕ ಡಿಜಿಟಲ್ ಮೀಡಿಯ ಅಸೋಸಿಯೇಷನ್ ಅಧ್ಯಕ್ಷರಾದ ಹನುಮೇಶ್ ಕೆ. ಯಾವಗಲ್ ಸ್ವಾಗತಿಸಿದರು. ಮಾಧ್ಯಮ ಸಮಾಲೋಚಕರಾದ ಎಸ್. ಆರ್. ಆರಾಧ್ಯ ಪ್ರಾಸ್ತಾವಿಕವಾಗಿ ಮಾತನಾಡಿದರು. ಹಿರಿಯ ಪತ್ರಕರ್ತೆ ಎಂ.ಪಿ.ಸುಶೀಲ ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದರು. ಪತ್ರಕರ್ತೆಯರಾದ ಮಾಲತಿ ಭಟ್, ಭಾರತಿ ಹೆಗಡೆ ಹಾಗೂ ಕಾನ್ಸೆಪ್ಟಾ ಫರ್ನಾಂಡಿಸ್ ಕಾರ್ಯಕ್ರಮ ನಿರ್ವಹಿಸಿದರು.

–ಡಾ. ಶ್ರೀನಿವಾಸ್ C N



ಮಾಧ್ಯಮ ಮಂಥನ ಕಾರ್ಯಾಗಾರವನ್ನು ಡಾ. ಎಂಎಸ್‌ಬಿಸಿಯು ಕುಲಪತಿಗಳಾದ ಪ್ರೊ. ಬಿ ರಮೇಶ್ ಮತ್ತು ಬೆಂಗಳೂರು ಉತ್ತರ ವಿಶ್ವವಿದ್ಯಾಲಯ ಕುಲಪತಿಗಳಾದ ಪ್ರೊ. ಬಿ.ಕೆ ರವಿ ಹಾಗೂ ಅತಿಥಿ ಗಣ್ಯರು ಉದ್ಘಾಟಿಸಿದರು.

ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆ



ವಾಲ್ಮೀಕಿ ಜಯಂತಿ ಸಮಾರಂಭದಲ್ಲಿ ಕುಲಪತಿ ಪ್ರೊ. ರಮೇಶ್. ಬಿ ಹಾಗೂ ಇತರೆ ಪ್ರಮುಖರು.

ಡಾ .ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 'ಜ್ಞಾನಜ್ಯೋತಿ ಸೆಂಟ್ರಲ್ ಕಾಲೇಜ್ ಕ್ಯಾಂಪಸ್' ಆವರಣದಲ್ಲಿರುವ ರಾಜಾಜಿ ಹಾಲ್‌ನಲ್ಲಿ ಅಕ್ಟೋಬರ್ 26 ರಂದು ಮಹರ್ಷಿ ವಾಲ್ಮೀಕಿ ಜಯಂತ್ಯೋತ್ಸವ ಆಚರಿಸಲಾಯಿತು.

ಕುಲಪತಿಗಳಾದ ಪ್ರೊ. ರಮೇಶ್.ಬಿ.ರವರ ಅಧ್ಯಕ್ಷತೆಯಲ್ಲಿ ಜರುಗಿದ ಸಮಾರಂಭದಲ್ಲಿ ಕುಲಸಚಿವರಾದ ಎ. ನವೀನ್ ಜೋಸೆಫ್, ವಿದ್ಯಾವಿಷಯಕ ಪರಿಷತ್ ಸದಸ್ಯರಾದ ಡಾ.ಬಿ.ಕೆ. ಗಿರಿ, ಹಿರಿಯ ಪ್ರಾಧ್ಯಾಪಕರಾದ ಪ್ರೊ.ಜ್ಯೋತಿ ವೆಂಕಟೇಶ್, ಪ್ರೊ. ಕೆ.ಶಿವಶಂಕರ್, ಪ್ರೊ.ಪಿ.ಆರ್. ಚೇತನ ಹಾಗೂ ಬೋಧಕ–ಬೋಧಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ವಾಲ್ಮೀಕಿಯವರ ಮಹಾಕಾವ್ಯ ಭಾರತೀಯ ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಂಪರೆಯ ಮೂಲ ಆಧಾರ ಗ್ರಂಥವಾಗಿದೆ ಎಂದು ಕುಲಪತಿಗಳಾದ ಪ್ರೊ. ರಮೇಶ್.ಬಿ. ಬಣ್ಣಿಸಿದರು. ಜ್ಞಾನಪೀಠ ಪುರಸ್ಕೃತ ರಾಷ್ಟ್ರಕವಿ ಕುವೆಂಪುರವರ "ಶ್ರೀ ರಾಮಾಯಣ ದರ್ಶನಂ" ಮೇರುಕೃತಿ ಮೂಲ ರಾಮಾಯಣಕ್ಕೆ ಪ್ರಗತಿಪರ ಚಿಂತನೆಯ ಹೊಸ ಆಯಾಮ ಒದಗಿಸಿತೆಂದು ಅವರು ವಿಶ್ಲೇಷಿಸಿದರು.

ಲಿಖಿತ ಮತ್ತು ಮೌಖಿಕ ಮಾದರಿಗಳ ಮೂಲಕ ಜನಮಾನಸದಲ್ಲಿ ಅಚ್ಚಳಿಯದ ಪ್ರಭಾವ ಬೀರಿರುವ ರಾಮಾಯಣ ಮಹಾಕಾವ್ಯ ಅನೇಕ ರೂಪಾಂತರಗಳನ್ನು ಪಡೆದುಕೊಂಡಿದೆ ಎಂದು ಅವರು ವಿವರಿಸಿದರು.

ಬುಡಕಟ್ಟು ಜನರ ಗೊಂಡ ರಾಮಾಯಣ, ಜನಪದ ರಾಮಾಯಣ ಮುಂತಾದ ವಿಧಗಳನ್ನು ಉಲ್ಲೇಖಿಸಿದ ಅವರು ರಾಮಾಯಣ ಕಥಾವಸ್ತು ಗ್ರಾಮೀಣ ಪ್ರದೇಶದಲ್ಲಿ ನಾಟಕ ಕಲೆ ಆಳವಾಗಿ ಬೇರೂರಲು ಪ್ರೇರಕವಾಗಿದೆ ಎಂದೂ ಪ್ರತಿಪಾದಿಸಿದರು.

ಕನ್ನಡ ಅಧ್ಯಯನ ವಿಭಾಗದ ಉಪನ್ಯಾಸಕರಾದ ಡಾ. ಎಸ್.ಅಖ್ತರ್ ಮತ್ತು ಡಾ.ಗಂಗಪ್ಪ ವಾಲ್ಮೀಕಿಯವರ ರಾಮಾಯಣ ಮಹಾಕಾವ್ಯದ ವಿವಿಧ ಆಯಾಮಗಳ ಕುರಿತು ಮಾತನಾಡಿದರು. ಡಾ.ಎಸ್.ಎಂ.ಗೋಪಿ ಕಾರ್ಯಕ್ರಮ ನಿರೂಪಿಸಿದರು.

Journalism Students' Field Visit



Students of MCJ Dr.MSBCU at the BU Electronic Media Workshop

Students from the Mass Communication and Journalism programs of Dr.MSBCU visited the Department of Electronic Media at Bangalore University on 6 October for hands-on training in digital content creation.

The session was conducted by Mr. Siddu Kaloji, Editor of VijayaVani Digital, who demonstrated practical techniques for producing engaging digital news and multimedia content.

Along with the students, faculty members Dr. Praveena D S, Dr. Srinivasa C N, and Mr. Sarvajith attended the workshop. The program included demonstrations of mobile journalism workflows, short-form video production, editing tips, content planning for social platforms, and best practices for audience engagement.

In a follow-up event on 14 October, BA Journalism students from Dr. Manmohan Singh Bengaluru City University attended a special radio workshop focused on RJ (radio jockey) techniques. The session was led by actor and RJ Mr. Vinayak Joshi, who taught voice modulation, scripting for radio, on-air presentation, interview techniques, and audience interaction skills. Students practiced live reads, mock shows, and learned technical aspects of radio broadcasting.



MCJ Students Visited the Press Club of Bengaluru

"ಜನಪದ ಮಹಾಕಾವ್ಯಗಳು ಮತ್ತು ಚರಿತ್ರೆ" ; "ವಿಜಯನಗರ ಸಾಮ್ರಾಜ್ಯ ಸ್ಥಾಪನೆ": ವಿಶೇಷ ಉಪನ್ಯಾಸ

ವಾರ್ಷಿಕ ಶೈಕ್ಷಣಿಕ ಕಾರ್ಯಕ್ರಮದ ಭಾಗವಾಗಿ ದಿನಾಂಕ 13–10–2026 ರಂದು ಘಃಅ ಸೆಮಿನಾರ್ ಹಾಲ್‌ನಲ್ಲಿ ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ 'ಜನಪದ ಮಹಾಕಾವ್ಯಗಳು ಮತ್ತು ಚರಿತ್ರೆ' ವಿಷಯವಾಗಿ ವಿಶೇಷ ಉಪನ್ಯಾಸ ಆಯೋಜಿಸಲಾಗಿತ್ತು.

ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದ ಮೌಖಿಕ ಚರಿತ್ರಕಾರ, ರಾಮನಗರದ ಜಾನಪದ ಲೋಕದ ಕ್ಯುರೇಟರ್ ಆಗಿರುವ ಡಾ.ಯು. ಎಂ.ರವಿರವರು ಮಾತನಾಡಿ, ಮೌಖಿಕ ಮಹಾಕಾವ್ಯಗಳಾದ ಮಲೆ ಮಾದೇಶ್ವರ ಕಾವ್ಯ, ಮಂಟೇಸ್ವಾಮಿ, ಜುಂಜಪ್ಪ, ಕೊಡೇಕಲ್ಲು ಬಸವ, ಮೈಲಾರಲಿಂಗನ ಕಾವ್ಯ ಹಾಗೂ ಕುಮಾರರಾಮನ ಕಾವ್ಯಗಳಲ್ಲಿ ದಾರ್ಶನಿಕ, ಆಧ್ಯಾತ್ಮಿ, ಸಾಂಸ್ಕೃತಿಕ ಹಾಗೂ ಆರ್ಥಿಕ ಅಸ್ಮಿತೆಗಳ ಆಶಯ ವ್ಯಕ್ತಗೊಂಡಿರುವುದರ ಬಗ್ಗೆ ಗಮನ ಸೆಳೆದರು.

ಜನಪದ ನಾಯಕರ ತಲೆಮಾರು ತಮ್ಮ ಶ್ರೀಮಂತ ಅನುಯಾಯಿ ಸಮುದಾಯಗಳ ಸಾಂಸ್ಕೃತಿಕ ಅಭಿವ್ಯಕ್ತಿಯನ್ನು ಪ್ರಾತ್ಯಕ್ಷಿಕೆ ಮತ್ತು ಛಾಯಾಚಿತ್ರಗಳೊಂದಿಗೆ ವಿದ್ಯಾರ್ಥಿಗಳಿಗೆ ಮನಮುಟ್ಟುವಂತೆ ಪ್ರಸ್ತುತಪಡಿಸಿದರು.

ಇಂದಿನ ಝೆನ್ಜಿ ಪಾರಂಪರಿಕ ಹಾಗೂ ಸಾಂಸ್ಕೃತಿಕ ಜ್ಞಾನಭಂಡಾರವನ್ನು ಹೊಂದಿರುವ ಮೌಖಿಕ ಸಾಹಿತ್ಯ, ಕಲೆ ಸಂಸ್ಕೃತಿಯನ್ನು ಅರಿಯುವಲ್ಲಿ ಶ್ರದ್ಧೆ ವಹಿಸಿ, ಬೌದ್ಧಿಕವಾಗಿ ಶ್ರೀಮಂತಗೊಳ್ಳಬೇಕೆಂದು ವಿಭಾಗದ ಮುಖ್ಯಸ್ಥರಾದ ಪ್ರೊ.ಕೆ.ಆರ್. ಜಲಜರವರು ವಿದ್ಯಾರ್ಥಿಗಳಿಗೆ ಸಲಹೆಯಿತ್ತರು.

ಇತಿಹಾಸ ಅನುಸಂಧಾನ ಪರಿಷತ್ ದಕ್ಷಿಣ ಪ್ರಾದೇಶಿಕ ಕಛೇರಿ ನಿರ್ದೇಶಕರಾದ ಡಾ. ಎಸ್.ಕೆ. ಅರುಣಿಯವರು ಸಂವಾದದಲ್ಲಿ ಪಾಲ್ಗೊಂಡರು. ಇತಿಹಾಸ ಉಪನ್ಯಾಸಕರಾದ ಡಾ.ಕಾಂತರಾಜು, ಡಾ.ಮಾಲಿನಿ ಉಪಸ್ಥಿತರಿದ್ದರು.

–ಡಾ. ಪುರುಷೋತ್ತಮ್,
ಇತಿಹಾಸ ಉಪನ್ಯಾಸಕರು



ಇತಿಹಾಸ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಉಪನ್ಯಾಸಕರು ಮತ್ತು ವಿದ್ಯಾರ್ಥಿಗಳು.

ಭಾರತೀಯ ಇತಿಹಾಸ ಅನುಸಂಧಾನ ಪರಿಷತ್ (ICHR), ದಕ್ಷಿಣ ಪ್ರಾದೇಶಿಕ ಕೇಂದ್ರ, ಬೆಂಗಳೂರು ಹಾಗೂ ಒಖಃಅಗ ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಸಂಯುಕ್ತ ಆಶ್ರಯದಲ್ಲಿ ಅಕ್ಟೋಬರ್ 29 ರಂದು ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ತುಮಕೂರು ವಿಶ್ವವಿದ್ಯಾಲಯದ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ಹಾಗೂ ಸಂಶೋಧನಾ ವಿಭಾಗದ ಪ್ರಾಧ್ಯಾಪಕ ಮತ್ತು ICHRನ ನಿಕಟಪೂರ್ವ ಸದಸ್ಯರಾದ ಪ್ರೊ. ಎಂ. ಕೊಟ್ರೇಶ್ ಅವರು "ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯಲ್ಲಿ ವಿದ್ಯಾರಣ್ಯರ ಪಾತ್ರ: ಇತ್ತೀಚಿನ ಸಂಶೋಧನೆಗಳ ಹಿನ್ನೆಲೆಯಲ್ಲಿ ಐತಿಹಾಸಿಕ ವಿಶ್ಲೇಷಣೆ" ಕುರಿತು ಉಪನ್ಯಾಸ ನೀಡಿದರು.

ಕುಲಪತಿಗಳಾದ ಪ್ರೊ. ರಮೇಶ್.ಬಿ. ಕಾರ್ಯಕ್ರಮ ಉದ್ಘಾಟಿಸಿದರು, ವಿಭಾಗದ ಮುಖ್ಯಸ್ಥರಾದ ಪ್ರೊ.ಕೆ.ಆರ್. ಜಲಜ ಅಧ್ಯಕ್ಷತೆ ವಹಿಸಿದ್ದರು. ICHR ಪ್ರಾದೇಶಿಕ ನಿರ್ದೇಶಕರಾದ ಡಾ.ಎಸ್. ಕೆ.ಅರುಣಿ, ಇತಿಹಾಸ ತಜ್ಞರಾದ ಪ್ರೊ. ಎಸ್. ಚಂದ್ರಶೇಖರ್, ಜೆ–ಎನ್‌ಯು ನಿವೃತ್ತ ಪ್ರಾಧ್ಯಾಪಕಿ ಪ್ರೊ. ಜಾನಕಿ ನಾಯರ್, ಪ್ರೊ. ಉಷಾದೇವಿ ಉಪಸ್ಥಿತರಿದ್ದರು.

–ಡಾ. ಮಾಲಿನಿ. ಎಂ.

World Mental Health Day Programme



MSW Students participated in World Mental Health Day programme.

On the occasion of World Mental Health Day, 'Samvaada' organised mental health awareness programme to highlight the importance of mental well-being, emotional resilience and the need to create a supportive and inclusive society.

The programme witnessed the participation of MSW students and Open Elective students from various departments. The initiative provided an opportunity for students from different academic backgrounds to understand the significance of mental health and its impact on individuals, families and society.

The programme aimed to create awareness about mental health issues, address the stigma and misconceptions associated with mental illness, and encourage young people to prioritise their emotional well-being.

It also emphasised the importance of empathy, mutual support, open conversations and seeking professional help whenever necessary.

The programme served as a valuable learning experience for the students, particularly in understanding the social dimensions of mental health and the importance of building compassionate and supportive communities.

Dr.Rajashekar C. fecilitated the programme , Faculty Member, Damodhar guided the students.

-Vanishree M

Best Paper Award Won

Davanagere University, in collaboration with the Indian Society of Professional Social Work (ISPSW), organized a three-day National Conference on "Innovative Technologies for Social Work Practice, Research and Development" from 7th to 9th, October 2026.

Prof. Ramesh B., Vice-Chancellor of Dr.Manmohan Singh Bengaluru City University and President of ISPSW, delivered the Chief Guest address.

A proud achievement of the department was **Ms. Devika,** First-Year MSW student, winning the Best Paper Award for her research presentation titled *"The Impact of Advanced Technologies on Employee Skill Development."* The research was carried out under the guidance of Vanishree M., Faculty, Dept. of Social Work.

Dr. Rajashekar C., Vanishree M., Siddesh, Dr. Lakshmirangaih and Vikram accompanied the students and represented the department at the conference.

-Damodhar, Faculty

International Symposium on Social Work Education and Practice

Department of Social Work, Dr.MSBCU organized International Symposium on Social Work Education and Practice : Transnational Perspective on 1st October 2026 in Jnanajyoti Auditorium.

Prof. Ramesh B, the Vice Chancellor of Dr.MSBCU in his inaugural speech deliberated the significance of adopting Transnational Perspective in Social Work Curriculum and Practices to prepare social work professionals in continental arenas.

Prof. Gandhidoss, President INPSWA & Veteran Social Worker, the Chief Guest of the program spoke on the occasion stressing the inclusion of Transnational ideologies and strategies in Social work profession in Asian Countries.



Dignitaries at International Symposium on Social Work Education

Mr. Sug Piyo Kim, President, Daegu Council of Social Welfare, South Korea President Eurasia Forum, the key note speaker of the Symposium opined the decolonization of Social work academia and stressed the need of shifting the learning perspective from Eurocentric to Asian eco system to understand and localize the need informed intervention of Social work profession..

Prof. Naoki Nakamura, Hokkaido University Japan distinguishes the Social Work academic and professional Perspectives in Japan & India. He gisted on the various technological and skill inventions, quality parameters and innovative strategies that are being utilized in Social work academia and Practice settings in Japan to meet the demanding requisites of profession.

MSW student Devika, compered the program. Social Students and Faculty from the Oxford College of Science, Arts, Commerce and Management, Acharya Institute of Graduate Studies, Christ University and Bangalore University along with the MSW students of Dr.MSBCU attended the Symposium.

From Text book toTest tube

MSc Chemistry 3rd Semester students visited the NMR facility at NCBS on 16th September, 2026 — a rare chance to see advanced chemistry instrumentation up close. Alumnus Satish (2023-25 batch), now working at the facility, walked the students through the spectrometers and the software behind the data, with insights beyond what a classroom offers. Students also checked out the other stalls and picked up info on internships and career opportunities. The visit was coordinated by faculty member Dr. Mahalakshmi, with support from DOSR Chemistry chairperson Prof. P. R. Chetana.



Students with Satish beside one of the NMR instruments

Exposure Visit to ISEC



Dr. MSBCU Sociology Dept. students visit to ISEC

Students of the Department of Sociology, Dr. Manmohan Singh Bengaluru City University, Bengaluru, visited the Institute for Social and Economic Change (ISEC), Bengaluru, as part of an academic exposure visit.

The visit provided students with an opportunity to understand the role of research institutions in promoting sociological research, knowledge generation and social development. The Director of ISEC, Prof. Gurulingaiah, a renowned sociologist, interacted with the students and shared his valuable insights and best wishes.

Dr. Sobin George briefed the students about ISEC, its research activities, academic programmes and contributions to the study of society and social transformation.

The visit was an enriching learning experience that helped students connect classroom learning with contemporary sociological research and practice.

Special Lecture Programme

A special lecture on *"Queer Voices and Liv gbed Realities: Identity, Stigma and Social Justice in India"* on 9 October 2026.

The lecture was delivered by Ms. Deepshikha from Panjab University, Chandigarh who shared insights into the lived experiences of queer communities, questions of identity, social stigma, and the importance of social justice and inclusion in Indian society. The session provided an opportunity for students to deepen their sociological understanding of gender and sexuality, social inequalities, and the challenges faced by LGBTQIA+ communities.

The programme encouraged critical reflection on the need to promote dignity, equality, acceptance, and an inclusive society.

-Dr. Savitha B C.

Faculty Development Programme

In continuation of its ongoing Skill Development initiatives, the Skill Development and Placement Centre, Dr. Manmohan Singh Bengaluru City University, organized the Faculty Development Programme (FDP) – Batch 2 and 3 on 29th September and 30th October 2026 respectively in association with Reach Much Higher and Intel at the WBC Auditorium, New Academic Block. The programme was conducted for the faculty members of BCU with the theme "Design Thinking Approach – Understanding, Profiling, Mentoring and Supporting Students."The 20-hour programme was designed around the motto, "Be a Student Again. Experience Learning in a New Way," The programme was organized under the guidance and leadership of the Hon'ble Vice-Chancellor, Prof. Ramesh B., and the Director-Placements, Prof. Ritika Sinha, reaffirming the University's commitment to continuous faculty development, innovative teaching practices and quality education.



Faculty Development Programme Batch 2



Faculty Development Programme Batch 3

-Sushma Sharma, Technical Asst, SDPC.

ಎನ್.ಎಸ್.ಎಸ್ ಶಿಬಿರ

ವಿಶ್ವವಿದ್ಯಾನಿಲಯದ ಮಹಿಳಾ ಮಹಾವಿದ್ಯಾಲಯ ಮಲ್ಲೇಶ್ವರಂ ಕಾಲೇಜಿನ ವತಿಯಿಂದ 2026-27ನೇ ಸಾಲಿನ (ಘಟಕ–೧) ರಾಷ್ಟ್ರೀಯ ಸೇವಾ ಯೋಜನಾ ವಾರ್ಷಿಕ ವಿಶೇಷ ಶಿಬಿರಕ್ಕೆ ಕುಲಪತಿಗಳಾದ ಪ್ರೊ.ರಮೇಶ್. ಬಿ.ಚಾಲನೆ ನೀಡಿದರು. ಪ್ರಾಂಶುಪಾಲರಾದ ಡಾ.ಹೇಮಾಮಾಲಿನಿರವರು ಶಿಬಿರಾರ್ಥಿಗಳಿಗೆ ಸಮವಸ್ತ್ರ, ಕ್ಯಾಪ್, ಎನ್.ಎಸ್.ಎಸ್. ದಿನಚರಿ ಮತ್ತು ಬ್ಯಾಡ್ಜ್ ವಿತರಿಸಿದರು.

ಶಿಬಿರಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ ಕುಲಪತಿಗಳು ವಿದ್ಯಾರ್ಥಿಗಳು ಅಂಕಗಳಿಗೆ ಮಾತ್ರ ಸೀಮಿತವಾಗಿರದೆ ಒಗ್ಗಟ್ಟು, ಹೊಂದಾಣಿಕೆ, ನಾಯಕತ್ವದ ಗುಣಗಳನ್ನು ಅಳವಡಿಸಿಕೊಳ್ಳಲು ಸಲಹೆಯಿತ್ತರು.

ದಿ. 28.10.2026 ರಿಂದ 03.11.2026 ರವರೆಗೆ ಚನ್ನಪಟ್ಟಣ ತಾಲ್ಲೂಕಿನ ಬೇವೂರುಮಂಡ್ಯ ಗ್ರಾಮದಲ್ಲಿ ಪರಿಸರ ಸಂರಕ್ಷಣೆ, ಆರೋಗ್ಯ ಶಿಬಿರ, ಸ್ವಚ್ಛತಾ ಕಾರ್ಯ ಮತ್ತಿತರ ಶ್ರಮದಾನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

UCW Students Visit R-Kannada

University College for Women, Malleswaram, visited Republic Kannada channel today along with members of the teaching fraternity. The industry visit aimed to provide students with practical exposure to real-world newsroom operations and deepen their understanding of broadcast journalism beyond the classroom.



Students and faculties of UCW Malleshwaram at R Kannada news

During the session, the channel's technical team guided students through key departments including PCR (Production Control Room), News Desk, Ingest Room, Data Unit, Teleprompter, and MCR (Master Control Room), explaining the workflow and technology that power 24x7 news broadcasting. The visit concluded with an iteractive Q&A session between students and R-Kannada team.

- Gayathri Yuvaraj, Faculty

Special Talk

The Department of Zoology, Dr.MSBCU under the aegis of the Zoological Society of, organized an invited talk on 23rd October 2026. Prof. Rajeev K. Boregowda, Associate Director, Gene Therapy, Sanofi, Boston, USA, spoke on the topic "Gene Therapy Drug Development: From Science to Patient."

The speaker explained the process of translating scientific discoveries into therapeutic interventions for patients.

'ಅನಿಕೇತನ' ಪ್ರತಿಭಾನ್ವೇಷಣೆ ಫಲಿತಾಂಶ

ಡಾ. ಎಂಎಸ್‌ಬಿಸಿಯು ಪ್ರಕಟಿಸುತ್ತಿರುವ 'ಅನಿಕೇತನ' ವಾರ್ಷಿಕ ವಿಶೇಷ ಸಂಚಿಕೆಯ ಪ್ರತಿಭಾ ಸ್ಪರ್ಧೆಗಳಲ್ಲಿ ವಿಜೇತರಾದವರ ಪಟ್ಟಿ ಇಂತಿದೆ:

1.ಸಣ್ಣ ಕಥೆ
ಪ್ರಥಮ ಬಹುಮಾನ:
ರಕ್ಷಾ ಆರ್. ಕುಮಾರ್, **II MSc.,** ಪ್ರಾಣಿಶಾಸ್ತ್ರ ವಿಭಾಗ
ದ್ವಿತೀಯ ಬಹುಮಾನ:
ಸಂಗೀತಾ ಎಸ್. **B.A.** (UCW)
ತೃತೀಯ ಬಹುಮಾನ:
ಬಸಪ್ಪ, ಎಂ.ಎ. (ಪ್ರಥಮ) ಕನ್ನಡ ವಿಭಾಗ

2.ಸ್ವರಚಿತ ಕವನ
ಪ್ರಥಮ ಬಹುಮಾನ:
ಗುರುನಾಥ ಚಲವಾದಿ ಎಂ.ಎ. (ಪ್ರಥಮ) ಕನ್ನಡ
ದ್ವಿತೀಯ ಬಹುಮಾನ:
ದಿವ್ಯಶ್ರೀ. ಎಂ. BCA (ದ್ವಿತೀಯ)
ತೃತೀಯ ಬಹುಮಾನ:
ಗಗನ ಎಂ. BCA (ದ್ವಿತೀಯ)

3.ಹನಿಗವನ
ಪ್ರಥಮ ಬಹುಮಾನ:
ಕವನ ಕೆ.ಓ ಎಂ.ಎ. Eng (ಪ್ರಥಮ)
ದ್ವಿತೀಯ ಬಹುಮಾನ:
ವಿನಿತಾ. ಕೆ. BCA (ಪ್ರಥಮ)
ತೃತೀಯ ಬಹುಮಾನ:
ರೆಹಾನ್ ಪಾಶಾ BCA (ಪ್ರಥಮ)

4.ವಿಜ್ಞಾನ ವಿಸ್ಮಯ
ಪ್ರಥಮ ಬಹುಮಾನ:
Ngangom Loyangamba Meeti , M.A. ಇಂಗ್ಲೀಷ್ (ದ್ವಿತೀಯ)
ದ್ವಿತೀಯ ಬಹುಮಾನ:
ಮಿಥಾ. ಆರ್.. MSc (ದ್ವಿತೀಯ) Biochemistry
ತೃತೀಯ ಬಹುಮಾನ:
ಗುರುನಾಥ ಚಲವಾದಿ, ಎಂ.ಎ. ಕನ್ನಡ (ಪ್ರಥಮ)

5.ಪ್ರಬಂಧ ಸ್ಪರ್ಧೆ
ಪ್ರಥಮ ಬಹುಮಾನ:
ರೋಹಿತ್ ಆನಂದ್ BCA (ತೃತೀಯ)
ದ್ವಿತೀಯ ಬಹುಮಾನ:
ಮನೋಜ್ ಕುಮಾರ್.ಸಿ.ಜೆ. BCA
ತೃತೀಯ ಬಹುಮಾನ:
ಅಭಿಷೇಕ್ ವಿ. –ಎಂ.ಕಾಂ.

6.ಛಾಯಾಗ್ರಹಣ
ಪ್ರಥಮ ಬಹುಮಾನ:
ಅನ್ವೀಬಾ ಕೆ.ಎ. II MSc., ಪ್ರಾಣಿಶಾಸ್ತ್ರ ವಿಭಾಗ
ದ್ವಿತೀಯ ಬಹುಮಾನ:
ಚಿತ್ರಾ ಟಿ. ಪಿ. MSc., Chemistry.
ತೃತೀಯ ಬಹುಮಾನ:
ಚರಣ್ ಆರ್, BCA (ಪ್ರಥಮ)

7.ವ್ಯಂಗ್ಯಚಿತ್ರ (ಕಾರ್ಟೂನ್)
ಪ್ರಥಮ ಬಹುಮಾನ:
ಶರಣ್ .ಎಸ್. –ಎಂ.ಕಾಂ.
ದ್ವಿತೀಯ ಬಹುಮಾನ:
ಜೀವನ್ .ಎನ್. BCA
ತೃತೀಯ ಬಹುಮಾನ:
ಮನೋಜ್ ಕುಮಾರ್. ಸಿ.ಜೆ. BCA

8.ಭಿತ್ತಿಪತ್ರ (ಪೋಸ್ಟರ್)
ಪ್ರಥಮ ಬಹುಮಾನ:
ವಿನಿತಾ. ಕೆ. BCA
ದ್ವಿತೀಯ ಬಹುಮಾನ:
ಹರ್ಷಿತಾ .ಎಂ. MSc.,
ತೃತೀಯ ಬಹುಮಾನ:
ಹರೀಶ್ ಕುಮಾರ್ – ಎಂ.ಕಾಂ.

KHO KHO TOURNAMENT



Hon'ble VC Inaguraitng the sport event by watering the plant

The Dr. MSBCU Inter-Collegiate Kho Kho Tournament was organised by SLN Degree College, Bengaluru, on 29th and 30th October.

The inaugural ceremony was graced by Prof. Ramesh B., Vice-Chancellor, Dr. MSBCU, as the Chief Guest. Prof. Sundar Raj Urs, Former Registrar (Evaluation), BNU, and Sri Girisha N., Director of Physical Education, were also present. The programme was presided over by Dr.Pawan Kumar D. B., Principal, and organised by Dr.Ravindra B. C., Physical Education Director, SLN Degree College.

Results:

- **Winners:** Government First Grade College (GFGC), Malleshwaram
- **Runners-up:** Government R. C. College, Bengaluru

The tournament promoted teamwork, discipline, physical fitness, and sportsmanship among students.

TABLE TENNIS TOURNAMENT

The Dr. MSBCU Table Tennis Tournament and Selection Trials were held at SRN Adarsh College, Bengaluru, on 12th and 13th October 2026, with the participation of 21 teams.

The event was inaugurated by Chief Guest Mrs. Jemima Pradeep and presided over by Mr. Padam Raj Mehta, President, AGI, and Mr. JitendraMardia, Secretary, AGI. Principal Dr.Prashanth S. warmly welcomed the gathering. In her address, Mrs. Jemima Pradeep emphasised the importance of sports in overall development, stating, "Sports is Life." The tournament was organised by Mr. Srinivasa K., Physical Education Director, SRN Adarsh College.

Results:

- **Men:**

Winners – SJCC;
Runners-up – Seshadripuram Main College.

- **Women:**

Winners – SJCC;
Runners-up – MCC College.



Winners of TT Tournament with prize and certificate

Badminton Tournament 2026–27

Dr.MSBCU conducted the Inter-Collegiate Badminton Tournament 2026–27 on 5th and 6th October 2026 at Sindhi College, Bengaluru. The tournament witnessed enthusiastic participation from affiliated colleges of the University, with 32 colleges participating in the Men's category and 20 colleges in the Women's category.

The tournament was formally inaugurated by Mr Chetan M. R., International Badminton Player, whose presence and words of encouragement inspired the participating players. Prize Distribution Ceremony was graced by Sri Prakash F. Madhwani, President, Sindhi College.

Results
Men's Category
Winners: Karnataka College of Management and Science (KCMS)
Runners-up: St. Joseph's College of Commerce (SJCC)
Women's Category
Winners: St. Joseph's College of Commerce (SJCC)
Runners-up: Indian Institute of Psychology and Research (IIPR)

Chess competition



Mattaniya Wilfred, MSBCU MSc Zoology 1st semester student was a member of the women chess team has secured 3rd place in inter-collegiate sports competition. She is selected for South zone chess competition which will be held from 9th to 12th November 2026 at Hyderabad.

TRACK CYCLING COMPETITION – 2026

The Dr. MSBCU Inter-Collegiate Track Cycling Competition was organised by SICM College on 17th October 2026, with the participation of 20 members from various colleges.

Results:
Men's Section:

- I Place:Likith V. – SICM College
- II Place: Manu S. Y. – SICM College
- III Place:Hemanth Gowda S. – M. S. Ramaiah College

Women's Section:

- I Place:Ramya S. – SICM College
- II Place:Amrutha A. – SICM College
- III Place: L. K. Janani – SEDC



Participants of Intercollegiate Cycling Comeptition

LISACON-2026 ಸಮ್ಮೇಳನ

LISACON-2026 ಅಂತಾರಾಷ್ಟ್ರೀಯ ಸಮ್ಮೇಳನವನ್ನು *"Libraries as Expericence centres : Explore-Engage-Evolve"* ಶೀರ್ಷಿಕೆಯಡಿ 2026 ನವೆಂಬರ್ 12 ರಿಂದ 14ರವರೆಗೆ ಸೆಂಟ್ರಲ್ ಕಾಲೇಜು ಆವರಣದಲ್ಲಿರುವ ಜ್ಞಾನಜ್ಯೋತಿ ಸಭಾಂಗಣದಲ್ಲಿ ಆಯೋಜಿಸಲಾಗಿದೆ. LIS ACADEMY (ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಕಾಡೆಮಿ) MSBCU, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಕರ್ನಾಟಕ ವಿಶ್ರಾಂತ ಕುಲಪತಿಗಳ ವೇದಿಕೆ (FVCK) ಸಹಯೋಗದೊಂದಿಗೆ ಈ ಸಮ್ಮೇಳನವನ್ನು ಆಯೋಜಿಸಿದೆ. ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನದ ವಿಷಯದಲ್ಲಿ ಸಂಬಂಧಪಟ್ಟ ನೂತನ ಸಂಶೋಧನಾ ಪ್ರಬಂಧಗಳು (Research Papers), ಪ್ರಕರಣ ಅಧ್ಯಯನಗಳು (Case Studies), ಉತ್ತಮ ಕಾರ್ಯವಿಧಾನಗಳ ವರದಿಗಳು (Best Practice Reports) ಸೇರಿದಂತೆ ಮೂಲ ಮತ್ತು ಈ ಹಿಂದೆ ಎಲ್ಲಿಯೂ ಪ್ರಕಟವಾಗದ ಸಂಶೋಧನಾ ಬರಹಗಳನ್ನು ಸಲ್ಲಿಸಲು ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ https://www.lisacon.org/about-conference ವೆಬ್‌ಸೈಟ್ ಸಂಪರ್ಕಿಸಬಹುದಾಗಿದೆ.

-**Santhosh,A** Library Asst.

ರಾಜ್ಯಶಾಸ್ತ್ರ ವಿದ್ಯಾರ್ಥಿಗಳಿಗೆ ಬಹುಮಾನ



ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಎಂ.ಎ. ರಾಜ್ಯಶಾಸ್ತ್ರ ವಿಭಾಗದ ದ್ವಿತೀಯ ವರ್ಷದ ವಿದ್ಯಾರ್ಥಿಗಳಾದ ಅರುಣ್, ನವೀನ್ ಮತ್ತು ಪಿಡ್ಡಣ್ಣ ಅಕ್ಟೋಬರ್ 16 ರಂದು ಹೊಸಕೋಟೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಜರುಗಿದ ರಾಜ್ಯಮಟ್ಟದ ರಸಪ್ರಶ್ನೆ ಸ್ಪರ್ಧೆಯಲ್ಲಿ ಭಾಗವಹಿಸಿ ತೃತೀಯ ಬಹುಮಾನ ಗಳಿಸಿದ್ದಾರೆ.

Visit Dr Manmohan Singh Bengaluru City University's official website **www.bcu.ac.in** for regular updates of Univeristy activities and also read ANIKETANA. Send Reports/Photos to **E-mail id : aniketana@bcu.ac.in**

ತಿಂಗಳ ಬುತ್ತಿ

ನವೆಂಬರ್ 01: ಕನ್ನಡ ರಾಜ್ಯೋತ್ಸವ
ನವೆಂಬರ್ 05: ರಾಗಿ ಲಕ್ಷ್ಮಣಯ್ಯ
ಸಾಧನೆ ಕುರಿತ ವಿಚಾರ ಸಂಕೀರಣ
ನವೆಂಬರ್ 12-14: LISACON
ನವೆಂಬರ್ 16: ರಾಷ್ಟ್ರೀಯ ಪತ್ರಿಕಾ ದಿನ
ನವೆಂಬರ್ 26: ಸಂವಿಧಾನ ದಿನಾಚರಣೆ
ನವೆಂಬರ್ 27: ಕನಕದಾಸರ ಜಯಂತಿ

ಸಂಪಾದಕೀಯ ಮಂಡಳಿ

ಡಾ. ಟಿ. ಎನ್. ತಾಂಡವ ಗೌಡ
ಪ್ರಸಾರಾಂಗ ನಿರ್ದೇಶಕರು.
ಎಸ್. ಆರ್. ಆರಾಧ್ಯ
ಮಾಧ್ಯಮ ಸಮಾಲೋಚಕರು.
ಡಾ. ಪ್ರವೀಣ ಡಿ.ಎಸ್.
ಡಾ. ಮರಿಸ್ವಾಮಿ.
ಡಾ. ತೇಜಸ್ವಿನಿ ದೇವಕುಮಾರ್.
ಡಾ. ಶ್ರೀನಿವಾಸ್ ಸಿ.ಎನ್.
ಡಾ. ನಾಜಿಯಾ ಕೌಸರ್.
ಗಾಯಿತ್ರಿ ವೈ.
ಸರ್ವಜಿತ್ ಕುಮಾರ್ ಜೆ.ಎನ್.
(ಪುಟ ವಿನ್ಯಾಸಕರು)
ಪುನೀತ್ ಡಿ.
(ತಾಂತ್ರಿಕ ಸಹಾಯಕರು)

ಮಾರ್ಗದರ್ಶಕ ಮಂಡಳಿ

ಪ್ರೊ. ರಮೇಶ್. ಬಿ
ಮಾನ್ಯ ಕುಲಪತಿಗಳು.
ನವೀನ್ ಜೋಸೆಫ್. ಎ
ಮಾನ್ಯ ಕುಲಸಚಿವರು.
ಪ್ರೊ.ರಮೇಶ.ಬಿ. ಕುಡೇನಟ್ಟಿ
ಕುಲಸಚಿವರು–ಮೌಲ್ಯಮಾಪನ.
ಎಂ.ವಿ. ವಿಜಯಲಕ್ಷ್ಮಿ
ಮಾನ್ಯ ವಿತ್ತಾಧಿಕಾರಿಗಳು.
ಪ್ರೊ. ಕೆ.ಆರ್.ಜಲಜಾ
ಡೀನರು, ಶಿಕ್ಷಣ ನಿಕಾಯ
ಪ್ರೊ. ಜ್ಯೋತಿ ವೆಂಕಟೇಶ್
ಡೀನರು, ಕಲಾ ನಿಕಾಯ.
ಪ್ರೊ. ಪಿ. ಆರ್. ಚೇತನ
ಡೀನರು, ವಿಜ್ಞಾನ ನಿಕಾಯ.
ಪ್ರೊ. ನಿರ್ಮಲ. ಎಂ
ಡೀನರು, ವಾಣಿಜ್ಯ ನಿಕಾಯ

ವಿದ್ಯಾರ್ಥಿ ಸಂಪಾದಕರು

ರವೀಂದ್ರ, ಎಂಸಿಜೆ, ದ್ವಿತೀಯ
ಪೂನಂ, ಎಂಸಿಜೆ, ಪ್ರಥಮ
ಶಶಿ ಜಿ (UCW), ಬಿ.ಎ.ಅಂತಿಮ

Printed and Published by The Registrar, Dr Manmohan Singh Bengaluru City University, Jnanajyothi Central College Campus, Ambedkar Veedhi, Bengaluru - 560001